# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5048 /2022

ಪ್ರಾ ಸಾ 29 ಚಾ ಸಾ 55

ಹೆಸರುಃ ಡಾ . ರಾಧಾ ಎಸ್

ತಂದೆಯ ಹೆಸರುಃ ಶ್ರೀನಿವಾಸ್

ವಯಸ್ಸುಃ 49 ವರ್ಷ

ಉದ್ಯೋಗಃ ಸಹಾಯಕ ನಿರ್ದೇಶಕರು , ಪ್ರಾದೇಶಿಕ ನ್ಯಾಯವಿಜ್ಞಾನ ಪ್ರಯೋಗಾಲಯ , ಮೈಸೂರು .

ವಾಸಃ ಮೈಸೂರು .

**ದಿಃ 17.06.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು 2011 ರಿಂದಲೂ ಮೈಸೂರಿನ ಪ್ರಾದೇಶಿಕ ನ್ಯಾಯವಿಜ್ಞಾನ ಪ್ರಯೋಗಾಲಯದಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸುತ್ತಾ ಬರುತ್ತಿದ್ದೇನೆ . ಪ್ರಸ್ತುತ ನಾನು ಸಹಾಯಕ ನಿರ್ದೇಶಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

2. ನಾನು 2004 ರಲ್ಲಿ ಸೇವೆಗೆ ಸೇರಿದಾಗ ನವದೆಹಲಿ ಎನ್ ಐ ಸಿ ಎಫ್ ಎಸ್ ಎಲ್ ನಲ್ಲಿ ವಿಧಿ ವಿಜ್ಞಾನ ದ ಬಗ್ಗೆ ಮೂರು ತಿಂಗಳ ಅವಧಿಯ ಬುನಾದಿ ತರಬೇತಿಯನ್ನು ಪಡೆದಿರುತ್ತೇನೆ ಮತ್ತು 2007 ರಲ್ಲಿ ಡಿ ಎನ್ ಎ ಫಿಂಗರ್ ಪ್ರಿಂಟ್ ಬಗ್ಗೆ ಒಂದು ತಿಂಗಳ ಅವಧಿಯ ಅದೇ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದಿರುತ್ತೇನೆ .

3. ನನ್ನ ಸೇವಾ ಅವಧಿಯಲ್ಲಿ ಸುಮಾರು 10,000 ಕ್ಕೂ ಹೆಚ್ಚು ಪ್ರಕರಣಗಳ ವಿಶ್ಲೇಷಣೆಗಳನ್ನು ನಡೆಸಿ ವರದಿ ನೀಡಿರುತ್ತೇನೆ ಮತ್ತು ಸುಮಾರು 2000 ಪ್ರಕರಣಗಳಲ್ಲಿ ಕರ್ನಾಟಕದ ವಿವಿಧ ನ್ಯಾಯಾಲಯಗಳಲ್ಲಿ ನನ್ನ ಸಾಕ್ಷ್ಯವನ್ನು ನುಡಿದಿರುತ್ತೇನೆ .

4. ನಮ್ಮ ಕಚೇರಿಗೆ ದಿಃ 17.02.2022 ರಂದು ಕೆ ಆರ್ ಸಾಗರ ಪೊಲೀಸ್ ಠಾಣೆಯ ಪೇದೆ 539 ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ 30/2022 ಕ್ಕೆ ಸಂಬಂಧಿಸಿದಂತೆ 14 ಮೊಹರಾದ ವಸ್ತುಗಳನ್ನು ನಮ್ಮ ಕಚೇರಿಗೆ ವಿಶ್ಲೇಷಣೆಗಾಗಿ ತಂದಿರುತ್ತಾರೆ .

5. ಸದರಿ ವಸ್ತುಗಳನ್ನು ನಮ್ಮ ಸ್ವಾಗತ ವಿಭಾಗದವರು ಆ ವಸ್ತುಗಳಿಗೆ ಕಚೇರಿ ಸಂಖ್ಯೆ ಆರ್ ಎಫ್ ಎಸ್ ಎಲ್ / ಬಿ ಎಸ್ 177 / 22 ಎಂದು ನೀಡಿ ಮುದ್ದೆಮಾಲುಗಳನ್ನು ಸ್ವೀಕರಿಸಿ ಸ್ವೀಕೃತಿ ಪತ್ರವನ್ನು ನೀಡಿರುತ್ತಾರೆ . ಸಾಕ್ಷಿಯು ಸದರಿ ಸ್ವೀಕೃತಿ ಪತ್ರವನ್ನು ಗುರುತಿಸಿದ್ದು ಇದನ್ನು ನಿಶಾನೆ ಪಿ. 39 ಎಂದು ಗುರುತಿಸಲಾಯಿತು.

6. ನಂತರ ಆ ವಸ್ತುಗಳನ್ನು ನಮ್ಮ ಜೀವಶಾಸ್ತ್ರ ವಿಭಾಗಕ್ಕೆ ಕಳುಹಿಸಿರುತ್ತಾರೆ . ನಾನು ಆ ವಸ್ತುಗಳನ್ನು ವಿಶ್ಲೇಷಣೆಗಾಗಿ ತೆಗೆದುಕೊಂಡಿರುತ್ತೇನೆ . ಅವುಗಳನ್ನು ನೋಡಿದಾಗ ಅವುಗಳ ಮೇಲಿದ್ದ ಮೊಹರುಗಳು ಸುಸ್ತಿತಿಯಲ್ಲಿದ್ದು, ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ ಮೊಹರಿನೊಂದಿಗೆ ಹೋಲಿಕೆಯಾಗುತ್ತದೆ .

7. ವಸ್ತುಗಳನ್ನು ವಿಶ್ಲೇಷ್ಷಣೆಗಾಗಿ ತೆರೆದು ನೋಡಲಾಗಿ ವಸ್ತು ಸಂಖ್ಯೆ 1 ರಿಂದ 4 ರಲ್ಲಿ ದಿಂಬಿನ ಕವರ್ ಗಳು, ವಸ್ತು ಸಂಖ್ಯೆ 5 ರಿಂದ 10 ಮತ್ತು 14 ರಲ್ಲಿ ಹತ್ತಿಯ ಸ್ವಾಬ್ ಗಳು ಇರುತ್ತವೆ . ವಸ್ತು ಸಂಖ್ಯೆ 11 , 12 ರಲ್ಲಿ ಒಂದೊಂದು ಕೌದಿ ಮತ್ತು ವಸ್ತು

ಸಂಖ್ಯೆ 13 ರಲ್ಲಿ ಒಂದು ಲಂಗ ಇರುತ್ತದೆ . ನಾನು ಸದರಿ ವಸ್ತುಗಳನ್ನು ರಾಸಾಯನಿಕ ಮತ್ತು ಸಿರಾಲಜಿ ಪರೀಕ್ಷೆಗೆ ಒಳಪಡಿಸಿರುತ್ತೇನೆ . ನನ್ನ ಪರೀಕ್ಷಾ ಫಲಿತಾಂಶದಂತೆ ಮೇಲ್ಕಂಡ ಎಲ್ಲಾ ವಸ್ತುಗಳಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದು ಅವು ಮನುಷ್ಯನ ಬಿ ಪಾಸಿಟಿವ್ ಗುಂಪಿಗೆ ಸೇರಿದ್ದ ರಕ್ತದ ಕಲೆಗಳಾಗಿವೆ . ಅದರಂತೆ ನನ್ನ ಅಭಿಪ್ರಾಯದ ವರದಿಯನ್ನು ನಮ್ಮ ಉಪನಿರ್ದೇಶಕರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿರುತ್ತೇನೆ . ಸಾಕ್ಷಿಯು ತಾನು ಸಲ್ಲಿಸಿರುವ ಪರೀಕ್ಷಾ ವರದಿಯನ್ನು ಗುರುತಿಸಿರುವುದರಿಂದ ಇದನ್ನು ನಿಶಾನೆ ಪಿ 40 ಎಂತಲೂ ಹಾಗೂ ಅದರಲ್ಲಿ ಆಕೆ ಗುರುತಿಸಿದ ಆಕೆಯ ಸಹಿಯನ್ನು ನಿಶಾನೆ ಪಿ 40 ಎ ಎಂತಲೂ ಗುರುತಿಸಲಾಯಿತು.

8. ಪರೀಕ್ಷೆಯಾದ ನಂತರ ಎಲ್ಲಾ ವಸ್ತುಗಳನ್ನು ಮರು ಪ್ಯಾಕ್ ಮಾಡಿ ನಮ್ಮ ಕಚೇರಿಯ ಮೊಹರಿನೊಂದಿಗೆ ಸೀಲು ಮಾಡಿ ಸಂಬಂಧಿಸಿದ ಪೊಲೀಸರಿಗೆ ವಾಪಸ್ ನೀಡಿರುತ್ತೇವೆ . ಮಾದರಿ ಮೊಹರನ್ನು ನನ್ನ ವರದಿಯೊಂದಿಗೆ ಲಗತ್ತಿಸಿರುತ್ತೇನೆ . ಸದರಿ ಮೊಹರನ್ನು ಸಾಕ್ಷಿ ಗುರುತಿಸಿದ್ದು

ಅದನ್ನು ನಿಪಿ 40 ಬಿ ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 40 ಸಿ ಎಂದು ಗುರುತಿಸಲಾಯಿತು.

9. ನಾನು ಪರೀಕ್ಷೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳನ್ನು ಈಗಾಗಲೇ ಮುದ್ದೆಮಾಲು 1 ರಿಂದ 14 ಎಂದು ಗುರುತಿಸಲಾಗಿದೆ .

10. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 18.02.2022 ರಂದು 25 ವಸ್ತುಗಳನ್ನು ನಮ್ಮ ಸ್ವಾಗತ ವಿಭಾಗದವರು ಆ ವಸ್ತುಗಳಿಗೆ ಕಚೇರಿ ಸಂಖ್ಯೆ ಆರ್ ಎಫ್ ಎಸ್ ಎಲ್ / ಬಿ ಎಸ್ 182 / 22 ಎಂದು ನೀಡಿ ಮುದ್ದೆಮಾಲುಗಳನ್ನು ಸ್ವೀಕರಿಸಿ ಸ್ವೀಕೃತಿ ಪತ್ರವನ್ನು ನೀಡಿರುತ್ತಾರೆ . ಸಾಕ್ಷಿಯು ಸದರಿ ಸ್ವೀಕೃತಿ ಪತ್ರವನ್ನು ಗುರುತಿಸಿದ್ದು ಇದನ್ನು ನಿಶಾನೆ ಪಿ. 41 ಎಂದು ಗುರುತಿಸಲಾಯಿತು. ಈ ಸ್ವೀಕೃತಿ ಪತ್ರದಲ್ಲಿ ಒಟ್ಟು 45 ಸ್ವತ್ತುಗಳನ್ನು ವಿಶ್ಲೇಷಣೆಗೆ ಕಳುಹಿಸಿದ್ದು ಅವುಗಳಲ್ಲಿ 5 ರಿಂದ 12 , 17 ರಿಂದ 20 , 25 ರಿಂದ 28 , 33 ರಿಂದ 36 , 41 ರಿಂದ 45 ವಸ್ತುಗಳನ್ನು ನಮ್ಮ ಜೀವಶಾಸ್ತ್ರ ವಿಭಾಗದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಯಿತು. ಆ ವಸ್ತುಗಳು ವಸ್ತು ಸಂಃ

5 ರಲ್ಲಿ ಒಂದು ಸೀರೆ , ವಸ್ತು ಸಂಃ 6 ರಲ್ಲಿ ಒಂದು ಪೆಟ್ಟಿಕೋಟ್ , ವಸ್ತು ಸಂಃ 7 ಒಂದು ಬ್ರಾ, ವಸ್ತು ಸಂಃ 8 ರಲ್ಲಿ ಒಂದು ಬ್ಲೌಸ್ , ವಸ್ತು ಸಂಃ 9 ರಲ್ಲಿ ಒಂದು ಸ್ವೆಟರ್ , ವಸ್ತು ಸಂಃ 10 ರಲ್ಲಿ ಒಂದು ಬ್ಯಾಂಡೇಜ್ ಕ್ಲಾತ್ ಪೀಸ್ (ರಕ್ತ ಸಂಗ್ರಹಿಸಿದ ಬ್ಯಾಂಡೇಜ್ ಬಟ್ಟೆ ) , ವಸ್ತು ಸಂಃ 11 ರಲ್ಲಿ ವೆಜೈನಲ್ ಸ್ವ್ಯಾಬ್ , ವಸ್ತು ಸಂಃ 12 ರಲ್ಲಿ ವೆಜೈನಲ್ ಸ್ಮಿಯರ್ , ವಸ್ತು ಸಂಃ 17 ರಲ್ಲಿ ಒಂದು ಟೀ ಶರ್ಟ್ , ವಸ್ತು ಸಂಃ 18 ರಲ್ಲಿ ಒಂದು ನಿಕ್ಕರ್ , ವಸ್ತು ಸಂಃ 19 ರಲ್ಲಿ ಒಂದು ಅಂಡರ್ ವೇರ್ , ವಸ್ತು ಸಂಃ 20 ರಲ್ಲಿ ರಕ್ತದ ಮಾದರಿ , ವಸ್ತು ಸಂಃ 25 ರಲ್ಲಿ ಒಂದು ಟೀಶರ್ಟ್ , ವಸ್ತು ಸಂಃ 26 ರಲ್ಲಿ ಒಂದು ಪ್ಯಾಂಟ್ , ವಸ್ತು ಸಂಃ 27 ರಲ್ಲಿ ಒಂದು ಅಂಡರ್ ವೇರ್ , ವಸ್ತು ಸಂಃ 28 ರಲ್ಲಿ ಬ್ಲಡ್ ಸ್ಯಾಂಪಲ್ , ವಸ್ತು ಸಂಃ 33 ರಲ್ಲಿ ಒಂದು ಸ್ವೆಟರ್ , ವಸ್ತು ಸಂಃ 34 ರಲ್ಲಿ ಒಂದು ಪ್ಯಾಂಟ್ , ವಸ್ತು ಸಂಃ 35 ರಲ್ಲಿ ಒಂದು ಟೀ ಶರ್ಟ್ , ವಸ್ತು ಸಂಃ 36 ರಲ್ಲಿ ಮಾದರಿ ರಕ್ತ , ವಸ್ತು ಸಂಃ 41 ರಲ್ಲಿ ಒಂದು ಟ್ರ್ಯಾಕ್ ಪ್ಯಾಂಟ್ , ವಸ್ತು ಸಂಃ 42 ರಲ್ಲಿ ಒಂದು ಟೀ ಶರ್ಟ್ , ವಸ್ತು ಸಂಃ 43 ರಲ್ಲಿ ಒಂದು ರಿಸ್ಟ್ ತ್ರೆಡ್ ( ಕೈದಾರ) , ವಸ್ತು ಸಂಃ 44 ರಲ್ಲಿ ಒಂದು ಅಂಡರ್ ವೇರ್ , ವಸ್ತು ಸಂಃ 45 ರಲ್ಲಿ

ರಕ್ತ ಸಂಗ್ರಹಿಸಿದ ಬ್ಯಾಂಡೇಜ್ ಬಟ್ಟೆ ಆಗಿರುತ್ತದೆ . ನಾನು ಸದರಿ ವಸ್ತುಗಳನ್ನು ರಾಸಾಯನಿಕ ಮತ್ತು ಸಿರಾಲಜಿ ಪರೀಕ್ಷೆಗೆ ಒಳಪಡಿಸಿರುತ್ತೇನೆ .

11. ನನ್ನ ಪರೀಕ್ಷಾ ಫಲಿತಾಂಶದಂತೆ ವಸ್ತು ಸಂಖ್ಯೆ 11 ಮತ್ತು 12 ನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ವಸ್ತುಗಳಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದು ಅವು ಮಾನವನ ಬಿ ಗುಂಪಿಗೆ ಸೇರಿದವುಗಳಾಗಿವೆ . ಈ ರಕ್ತದ ಕಲೆಗಳ ಉಪ ಗುಂಪು ಆದ ಆರ್ ಹೆಚ್ ಪ್ಯಾಕ್ಟರನ್ನು ನಿಖರವಾಗಿ ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ.

12. ವಸ್ತು ಸಂಖ್ಯೆ 11 ರಲ್ಲಿ ಯಾವುದೇ ವೀರ್ಯದ ಕಲೆಗಳು ಕಂಡುಬಂದಿರುವುದಿಲ್ಲ. ವಸ್ತು ಸಂ.12 ರಲ್ಲಿವೀರ್ಯಾಣುವೂ ಕಂಡುಬಂದಿರುವುದಿಲ್ಲ. ಈ ಅಭಿಪ್ರಾಯವನ್ನು ನಾನು ನನ್ನ ಉಪನಿರ್ದೇಶಕರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿರುತ್ತೇನೆ . ವಸ್ತು ಸಂಖ್ಯೆ 11 ಮತ್ತು 12 ರಲ್ಲಿ ವೆಜೈನಲ್ ಸ್ಮಿಯರ್ ಮತ್ತು ವೆಜೈನಲ್ ಸ್ವ್ಯಾಬ್ ಆಗಿರುತ್ತದೆ .

13. ಪರೀಕ್ಷೆ ಆದ ನಂತರ ಎಲ್ಲಾ ವಸ್ತುಗಳನ್ನು ಪ್ಯಾಕ್ ಮಾಡಿ ಮೊಹರು ಮಾಡಿ ಸಂಬಂಧಿಸಿದ ಪೊಲೀಸರಿಗೆ ಹಿಂದಿರುತ್ತೇನೆ . ಮಾದರಿ ಮೊಹರನ್ನು ವರದಿಯೊಂದಿಗೆ ಲಗತ್ತಿಸಿರುತ್ತೇನೆ .

14. ಸಾಕ್ಷಿಯು ತಾನು ನೀಡಿದ ವರದಿಯನ್ನು ಗುರುತಿಸಿದ ಮೇರೆಗೆ ಇವುಗಳನ್ನು ನಿಪಿ 42 ಎಂದು ಅದರಲ್ಲಿರುವ ಸಹಿಯನ್ನು ಗುರುತಿಸಿದ ಮೇರೆಗೆ ನಿಪಿ 42 ಎ ಎಂದೂ ಮತ್ತು ಮಾದರಿ ಸೀಲ್ ನ ನಕಲನ್ನು ನಿಪಿ 42 ಬಿ ಎಂದೂ ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ.42 ಸಿ ಎಂದು ಗುರುತಿಸಲಾಯಿತು.

15. ನಾನು ಪರೀಕ್ಷೆಗೆ ಒಳಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ .

16. ನಾನು ಪರೀಕ್ಷೆಗೆ ಒಳಪಡಿಸಿದ ವಸ್ತುಗಳ ಪೈಕಿ ವಸ್ತು ಸಂಖ್ಯೆ 5 ರಿಂದ 12 ರಲ್ಲಿನ ವಸ್ತುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮುದ್ದೆಮಾಲು 28 ರಿಂದ 35 ಎಂದು

ಗುರುತಿಸಲಾಯಿತು. ವಸ್ತು ಸಂಖ್ಯೆ 17 ರಿಂದ 20 ರಲ್ಲಿ ಇರುವ ವಸ್ತುಗಳನ್ನು ಗುರುತಿಸಿದ ಮೇರೆಗೆ ಮುದ್ದೆಮಾಲು 36 ರಿಂದ 39 ಎಂದು ಗುರುತಿಸಲಾಯಿತು. ವಸ್ತು ಸಂಖ್ಯೆ 25 ರಿಂದ 28 ರಲ್ಲಿರುವ ವಸ್ತುಗಳನ್ನು ಗುರುತಿಸಿದ ಮೇರೆಗೆ ಮುದ್ದೆಮಾಲು 40 ರಿಂದ 43 ಎಂದು ಗುರುತಿಸಲಾಯಿತು. ವಸ್ತು ಸಂಃ 33 ರಿಂದ 36 ರಲ್ಲಿ ಇರುವ ವಸ್ತುಗಳನ್ನು ಮುದ್ದೆಮಾಲು 44 ರಿಂದ 47 ಎಂದು ಗುರುತಿಸಲಾಯಿತು. ವಸ್ತು ಸಂಃ 41 ರಿಂದ 45 ರ ವಸ್ತುಗಳ ಪೈಕಿ 41 , 42 ಮತ್ತು 44 ರ ವಸ್ತುಗಳನ್ನು ಈಗಾಗಲೇ ಮುದ್ದೆಮಾಲು 26 , 25 ಮತ್ತು 27 ಎಂದು ಕ್ರಮವಾಗಿ ಗುರುತಿಸಲಾಗಿದೆ . 43 ಮತ್ತು 45 ರ ವಸ್ತುಗಳು ನ್ಯಾಯಾಲಯದ ಮುಂದಿರುವ ಮುದ್ದೆಮಾಲು 48 ಮತ್ತು 49 ಆಗಿರುತ್ತದೆ. ಮೇಲಿನ ಎಲ್ಲಾ ವಸ್ತುಗಳು ಪ್ರತ್ಯೇಕ ಬಟ್ಟೆಯ ಚೀಲಗಳಲ್ಲಿ ಪ್ಯಾಕ್ ಮಾಡಿ ಮೊಹರುಗಳನ್ನು ಹೊಂದಿದ್ದು ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಉಭಯ ಕಡೆಯ ಸಮಕ್ಷಮದಲ್ಲಿ ತೆರೆದು ನೋಡಿ ಸಾಕ್ಷಿ ಗುರುತಿಸಿದ ಮೇರೆಗೆ ಮುದ್ದೆಮಾಲುಗಳಾಗಿ ಗುರುತಿಸಲಾಯಿತು.

17. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 24.02.2022

ರಂದು 7 ಸೀಲ್ ಆದ ವಸ್ತುಗಳನ್ನು ನಮ್ಮ ಸ್ವಾಗತ ವಿಭಾಗದವರು ಆ ವಸ್ತುಗಳಿಗೆ ಕಚೇರಿ ಸಂಖ್ಯೆ ಆರ್ ಎಫ್ ಎಸ್ ಎಲ್ / ಬಿ ಎಸ್ 207 / 22 ಎಂದು ನೀಡಿ ಮುದ್ದೆಮಾಲುಗಳನ್ನು ಸ್ವೀಕರಿಸಿ ಸ್ವೀಕೃತಿ ಪತ್ರವನ್ನು ನೀಡಿರುತ್ತಾರೆ. ಸಾಕ್ಷಿಯು ಸದರಿ ಸ್ವೀಕೃತಿ ಪತ್ರವನ್ನು ಗುರುತಿಸಿದ್ದು ಇದನ್ನು ನಿಶಾನೆ ಪಿ. 43 ಎಂದು ಗುರುತಿಸಲಾಯಿತು.

18. ಸದರಿ ವಸ್ತುಗಳನ್ನು ನಾನು ವಿಶ್ಲೇಷಣೆಗಾಗಿ ತೆಗೆದುಕೊಂಡು ನೋಡಲಾಗಿ ಅವುಗಳ ಮೇಲಿನ ಮೊಹರುಗಳು ಸುಸ್ಥಿತಿಯಲ್ಲಿದ್ದವು . ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ ಮೊಹರಿನೊಂದಿಗೆ ತಾಳೆಯಾಗುತ್ತಿದ್ದವು.

19. ವಿಶ್ಲೇಷಣೆಗಾಗಿ ವಸ್ತುಗಳನ್ನು ತೆರೆದು ನೋಡಿದಾಗ ಒಂದು ಕಬ್ಬಿಣದ ಸುತ್ತಿಗೆ , ವಸ್ತು ಸಂಃ 2 ರಲ್ಲಿ ಒಂದು ಸೀರೆ, ವಸ್ತು ಸಂಃ 3 ರಲ್ಲಿ ಒಂದು ಬೌಸ್ , ವಸ್ತು ಸಂಃ 4 ರಲ್ಲಿ ಒಂದು ಲಂಗ , ವಸ್ತು ಸಂಃ 5 ರಲ್ಲಿ ಒಂದು ಸ್ಕಾರ್ಪ್ , ವಸ್ತು ಸಂಃ 6 ರಲ್ಲಿ

ಒಂದು ಮಚ್ಚು , ವಸ್ತು ಸಂ ಃ 7 ರಲ್ಲಿ ಒಂದು ಬ್ಲಾಂಕೆಟ್ ಇರುತ್ತವೆ . ಅ ಸದರಿ ವಸ್ತುಗಳನ್ನು ರಾಸಾಯನಿಕ ಮತ್ತು ಸಿರಾಲಜಿ ಪರೀಕ್ಷೆಗೆ ಒಳಪಡಿಸಿರುತ್ತೇನೆ .

20. ನನ್ನ ಪರೀಕ್ಷಾ ಫಲಿತಾಂಶದಂತೆ ವಸ್ತು ಸಂಖ್ಯೆ 1 ರಿಂದ 7 ರಲ್ಲಿ ರಕ್ತದ ಕಲೆಗಳು ಕಂಡುಬಂದಿರುತ್ತವೆ . ವಸ್ತು ಸಂಃ 2 , 3 ಮತ್ತು 7 ರಲ್ಲಿದ್ದ ರಕ್ತದ ಕಲೆಗಳು ಮಾನವನ ಬಿ ಗುಂಪಿಗೆ ಸೇರಿದ್ದವುಗಳಾಗಿವೆ. ಅವುಗಳ ಉಪಗುಂಪುಗಳನ್ನು ನಿಖರವಾಗಿ ಕಂಡುಹಿಡಿಯಲು ಸಾಧ್ಯವಾಗಿಲ್ಲ. ವಸ್ತುಗಳ ಸಂಃ 1, 4 , 5 ಮತ್ತು 6 ರಲ್ಲಿದ್ದ ರಕ್ತದ ಕಲೆಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯ ಇಲ್ಲದೇ ಇದುದರಿಂದ ಅವುಗಳ ಮೂಲ ಮತ್ತು ಗುಪುಗಳನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ. ಅದರಂತೆ ನನ್ನ ಅಭಿಪ್ರಾಯದ ವರದಿಯನ್ನು ನಮ್ಮ ಉಪನಿರ್ದೇಶಕರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿರುತ್ತೇನೆ . ಸಾಕ್ಷಿಯು ತಾನು ಸಲ್ಲಿಸಿರುವ ಪರೀಕ್ಷಾ ವರದಿಯನ್ನು ಗುರುತಿಸಿರುವುದರಿಂದ ಇದನ್ನು ನಿಪಿ 44 ಎಂತಲೂ ಹಾಗೂ ಅದರಲ್ಲಿ ಆಕೆ ಗುರುತಿಸಿದ ಆಕೆಯ ಸಹಿಯನ್ನು ನಿಪಿ 44 ಎ ಎಂತಲೂ ಗುರುತಿಸಲಾಯಿತು.

21. ಪರೀಕ್ಷೆಯಾದ ನಂತರ ಎಲ್ಲಾ ವಸ್ತುಗಳನ್ನು ಮರು ಪ್ಯಾಕ್ ಮಾಡಿ ನಮ್ಮ ಕಚೇರಿಯ ಮೊಹರಿನೊಂದಿಗೆ ಸೀಲು ಮಾಡಿ ಸಂಬಂಧಿಸಿದ ಪೊಲೀಸರಿಗೆ ವಾಪಸ್ ನೀಡಿರುತ್ತೇವೆ. ಮಾದರಿ ಮೊಹರನ್ನು ನನ್ನ ವರದಿಯೊಂದಿಗೆ ಲಗತ್ತಿಸಿರುತ್ತೇನೆ. ಸದರಿ ಮೊಹರನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 44 ಬಿ ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 44 ಸಿ ಎಂದು ಗುರುತಿಸಲಾಯಿತು. ಪರೀಕ್ಷೆಗೆ ಒಳಪಡಿಸಿದ 7 ವಸ್ತುಗಳು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 19 ರಿಂದ 23 , 16 ಮತ್ತು 17 ಆಗಿರುತ್ತವೆ .

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಎಸ್ ಆರ್ ಎಸ್ ವಕೀಲರಿಂದಃ

22. ವಿಧಿ ವಿಜ್ಞಾನ ಪ್ರಯೋಗಾಲಯದ ಸೇವಾ ಅರ್ಹತೆಗೆ ಅಗತ್ಯ ಇದ್ದಂತೆ ನಾನು ಸ್ನಾತಕೋತ್ತರ ಪದವಿ ಮತ್ತು ಪಿ ಹೆಚ್ ಡಿ ಯನ್ನು ಮೈಕ್ರೋ ಬಯಾಲಜಿ ವಿಷಯದಲ್ಲಿ ಮಾಡಿರುತ್ತೇನೆ.

23. ದಿಃ 17.02.2022 ಮತ್ತು ದಿಃ 18.02.2022 ರಂದು ವಿಶ್ಲೇಷಣೆಗೆ ಸ್ವೀಕರಿಸಿದ ವಸ್ತುಗಳ ವಿಶ್ಲೇಷಣೆಯನ್ನು ಒಂದೇ ದಿನದಲ್ಲಿ ಮಾಡಿರುತ್ತೀರಾ ಎಂದರೆ ಬೇರೆ ಬೇರೆ ದಿನಗಳಲ್ಲಿ ಮಾಡಿರುತ್ತೇವೆ . ಅವುಗಳಲ್ಲಿ ಒಂದನ್ನು 18.02.2022 ರಂದು ಹಾಗೂ ಇನ್ನೊಂದನ್ನು 19.02.2022 ರಂದು ಮಾಡಿರುತ್ತೇನೆ . ಇದೇ ದಿನಾಂಕಗಳಂದು ವಿಶ್ಲೇಷಣೆ ಮಾಡಿರುತ್ತೇನೆ ಎಂದು ನನ್ನ ವರದಿಗಳಲ್ಲಿ ನಮೂದಾಗಿಲ್ಲ.

24. ನಿಪಿ 40 ರ ವಿಶ್ಲೇಷಣೆ ಮಾಡಿ ವರದಿಯನ್ನು ನೀಡುವ ಸಂದರ್ಭದಲ್ಲಿ ಅವುಗಳ ಗಾತ್ರ, ಯಾವ ಸ್ಥಳದಲ್ಲಿದೆ ಮತ್ತು ಎಷ್ಟು ಇದೆ ಎಂಬ ಬಗ್ಗೆ ವರದಿಯಲ್ಲಿ ನಮೂದಿಸಿರುತ್ತೇನೆ .

25. ನಿಪಿ 42 ನ್ನು ವಿಶ್ಲೇಷಣೆ ಮಾಡುವ ಕಾಲಕ್ಕೆ ಅದರಲ್ಲಿ ಇರುವ ವಸ್ತುಗಳಲ್ಲಿ ಬ್ಲಡ್ ಸ್ಟೇನ್ ಎಷ್ಟಿದೆ ಹಾಗೂ ಯಾವ ಸ್ಥಳದಲ್ಲಿದೆ ಮತ್ತು ಎಷ್ಟು ಇದೆ ಎಂಬ ಬಗ್ಗೆ ವರದಿಯಲ್ಲಿ ನಮೂದಿಸಿರುತ್ತೇನೆ .

26. ಮುದ್ದೆ ಮಾಲು 43 ಮತ್ತು 49 ರಲ್ಲಿ ರಕ್ತದ ಸಬ್ ಗ್ರೂಪ್

(ಉಪಗುಂಪು} ಅನ್ನು ಮಾಡಲು ಕೊರತೆ ಏನು ಇತ್ತು ಎಂದರೆ ಒಣಗಿದ ರಕ್ತದ ಕಲೆಗಳಲ್ಲಿ ದಿನಗಳೆದಂತೆ ಅದರ ಉಪ ಗುಂಪನ್ನು ಕಂಡುಹಿಡಿಯುವ ಗುಣಲಕ್ಷಣಗಳುಳ್ಳ ಅಂಶಗಳು ಕಡಿಮೆಯಾಗಿರುತ್ತದೆ. ಆದ್ದರಿಂದ ಅವುಗಳ ಉಪಗುಂಪನ್ನು ನಿರ್ದಿಷ್ಟವಾಗಿ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ.

27. ಮುದ್ದೆಮಾಲು 39 ಮತ್ತು 43 ರಲ್ಲಿ ತೋರಿಸಿರುವ ವಸ್ತುಗಳನ್ನು ಏಕಕಾಲಕ್ಕೆ ಸಂಗ್ರಹಿಸಿ ಏಕಕಾಲದಲ್ಲಿ ಕಳುಹಿಸಿದ್ದರೂ ಸಹ ಬ್ಲಡ್ ಗ್ರೂಪಿಂಗ್ ಮಾಡುವಾಗ ಬ್ಲಡ್ ಸ್ಯಾಂಪಲ್ ನಲ್ಲಿ ಗುಂಪುಗಳನ್ನು ಮಾಡಲಾಗುತ್ತದೆ ಮತ್ತು ಅದರೊಂದಿಗೆ ಸಂಗ್ರಹಿಸಿದ ಇತರ ವಸ್ತುಗಳಲ್ಲಿರುವ ರಕ್ತದ ಕಲೆಗಳಲ್ಲಿ ಸಬ್ ಗ್ರೂಪನ್ನು ಮಾಡಲಾಗುವುದಿಲ್ಲ ಎಂದರೆ ಸಾಕ್ಷಿಯು ಅವುಗಳನ್ನು ಒಂದೇ ದಿನದಲ್ಲಿ ಸಂಗ್ರಹಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಮತ್ತು ನನ್ನ ವರದಿಯಂತೆ ಉಪ ಗುಂಪನ್ನು ನಿರ್ದಿಷ್ಟವಾಗಿ ಹೇಳಲು ಮಾತ್ರ ಸಾಧ್ಯವಾಗಿರುವುದಿಲ್ಲ. ಎಲ್ಲಾ ವಸ್ತುಗಳನ್ನು ಏಕಕಾಲದಲ್ಲಿ ಸಂಗ್ರಹಿಸಿರುವ ಕಾರಣದಿಂದಾಗಿ

ಮುದ್ದೆಮಾಲು 39 ಮತ್ತು 43 ರಲ್ಲಿ ಬಂದ ಫಲಿತಾಂಶವೇ ಉಳಿದ ವಸ್ತುಗಳ ಪರೀಕ್ಷೆಯ ಫಲಿತಾಂಶದಲ್ಲಿ ಬರಬೇಕಿತ್ತು ಎಂದರೆ ಸಾಕ್ಷಿಯು ಬರಬಹುದು ಎನ್ನಬಹುದಷ್ಟೇ ಹೊರತು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ. ನಮ್ಮ ಸಿರಾಲಜಿ ರಕ್ತದ ಪರೀಕ್ಷೆಗೆ ರಕ್ತದ ಕಲೆ ಸುಮಾರು 75 ರಿಂದ 150 ಮಿಲಿ ಗ್ರಾಂ ನಷ್ಟು ಪ್ರಮಾಣದಲ್ಲಿ ಇದ್ದರೆ ಅವುಗಳ ಪರೀಕ್ಷೆಗಳನ್ನು ಮಾಡಬಹುದು .

ಪ್ರಶ್ನೆ ಃ ಮುದ್ದೆ ಮಾಲು 39 ಮತ್ತು 43 ನ್ನು ಮಾನವನ ಶರೀರದಿಂದ ರಕ್ತದ ಸ್ಯಾಂಪಲ್ ಆಗಿ ಪಡೆದುಕೊಂಡು ಪರೀಕ್ಷೆಗೆ ಒಳಪಡಿಸಿದ್ದು ಅದೇ ದಿನ ಉಳಿದ ಮುದ್ದೆಮಾಲುಗಳಲ್ಲಿ ಇರುವ ರಕ್ತದ ಕಲೆಗಳಲ್ಲಿ ಕೆಲವೊಂದರಲ್ಲಿ ಆರ್ ಹೆಚ್ ಪ್ಯಾಕಟ್‌ರ್ ನ್ನು ಗುರುತಿಸಿ ಉಪ ಗುಂಪುಗಳನ್ನು ಗುರುತಿಸಲು ಆಗಿದ್ದು ಆದರೆ ಮುದ್ದೆಮಾಲು 39 ಮತ್ತು 43 ರಲ್ಲಿ ಯಾಕೆ ಆರ್ ಹೆಚ್ ಪ್ಯಾಕ್ಟರ್ ಮೂಲಕ ಉಪ ಗುಂಪುಗಳನ್ನು ಮಾಡಲಾಗಿಲ್ಲ ?

ಉತ್ತರ ಃ ಮುದ್ದೆಮಾಲು 39 ಮತ್ತು 43 ರ ರಕ್ತದ ಕಲೆಗಳಲ್ಲಿದ್ದ ಉಪ ಗುಂಪಿನ ಅಂಶಗಳು ಕ್ಷೀಣಿಸಿದ್ದು

ನಿಖರವಾಗಿ ಉಪಗುಂಪನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ.

28. ನನ್ನ ಪ್ರಯೋಗಾಲಯಕ್ಕೆ ರಕ್ತದ ಸ್ಯಾಂಪಲ್ ಗಳನ್ನು ಕಳುಹಿಸುವಾಗ ಅವುಗಳನ್ನು ಒಣಗಿಸಿ ಕಳುಹಿಸಿ ಕೊಟ್ಟಿದ್ದರು. ನಿಪಿ44 ರಲ್ಲಿ ರಕ್ತದ ಸ್ಯಾಂಪಲ್ ನ ಪ್ರಮಾಣ , ಅದರ ಗಾತ್ರ ಹಾಗೂ ಸಂಗ್ರಹಿಸಿದ ವಸ್ತುವಿನ ಯಾವ ಸ್ಥಳದಲ್ಲಿ ಇದೆ ಎಂದು ನೋಟ್ ಮಾಡಿದ್ದೇವೆ ಎಂದು ಹೇಳಿದ್ದು ಆದರೆ ನಾನು ಅದರ ಪ್ರಮಾಣ , ಗಾತ್ರ ಮತ್ತು ಸಂಗ್ರಹಿಸಿದ ವಸ್ತುವಿನ ಯಾವ ಸ್ಥಳದಲ್ಲಿ ಇದೆ ಎಂದು ಬರೆದಿಲ್ಲ. ನಿಪಿ 44 ರಲ್ಲಿ ಬ್ಲಾಂಕೆಟ್ ಅನ್ನು ಹೊರತುಪಡಿಸಿ ಇತರ ಸ್ವತ್ತುಗಳಲ್ಲಿ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಿಗೆ ಸಹಕರಿಸುವ ಉದ್ದೇಶದಿಂದ ಇಲ್ಲಿ ಸುಳ್ಳು ವರದಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ರಕ್ತದ ಕಲೆಯು ಇಲ್ಲದೇ ಇದ್ದ ಕಾರಣದಿಂದಾಗಿ ನಿಪಿ 44 ರ ವರದಿಯಲ್ಲಿ ರಕ್ತದ ಸ್ಯಾಂಪಲ್ ನ ಪ್ರಮಾಣ , ಗಾತ್ರ ಮತ್ತು ಸಂಗ್ರಹಿಸಿದ ವಸ್ತುವಿನ ಯಾವ ಸ್ಥಳದಲ್ಲಿ ರಕ್ತದ ಕಲೆ ಇತ್ತು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)